**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ಚನ್ನಗಿರಿ, ನ್ಯಾಯಾಲಯದಲ್ಲಿ</u>**

**<u>ಸಿ.ಸಿ ನಂ: 07/2025</u>**

| **ಪಿರ್ಯಾದುದಾರರು** | **ವಿರುದ್ಧ** | **ಆರೋಪಿ:** |
|---|---|---|
| ಮಹಮ್ಮದ್ ಮುದಾಸಿರ್ ಬಿನ್ ಮಹಮ್ಮದ್ ಸಿಗ್ಬತುಲ್ಲಾ, 27 ವರ್ಷ, ವೃತ್ತಿಃ ಎಲೆಕ್ಟ್ರಿಷನ್, ವಾಸಃ ಕೆ ಜಿ ನಗರ, 3ನೇ ಕ್ರಾಸ್, ಚನ್ನಗಿರಿ ನಗರ ಮತ್ತು ತಾಲ್ಲೂಕು, ದಾವಣಗೆರೆ ಜಿಲ್ಲೆ | | ಮಹಮ್ಮದ್ ಜಿಶಾನ್ ಹಬಿಬುಲ್ಲಾ ತಂದೆ ಎನ್ ಮಹಮ್ಮದ್ ಅಲಿ, 34 ವರ್ಷ, ವಾಸಃ ಮ್ಯಾನೇಜರ್, ಕಾನ್ಸೆಪ್ಟ್ ಕಾರ್ ಉಡುಪಿ,<br>ಕೆಲಸದ ವಿಳಾಸಃ ಡೋರ್ ನಂ. #4-1-34chi-1, ಗಾಂಧಿ ನಗರ, ಗಾಂಧಿ ನಗರ ಅಂಚೆ, ಬ್ರಹ್ಮಗಿರಿ ರಸ್ತೆ, ಅಂಬಲವಾಡಿ, ಉಡುಪಿ ನಗರ, ಉಡುಪಿ ಜಿಲ್ಲೆ.<br>ವಾಸಃ ಕೆ ಆರ್ ಪುರಂ, ಕಿರಣ್ ಮೆಡಿಕಲ್ಸ್ ಎದುರುಗಡೆ, ಶಿವಮೊಗ್ಗ. |

**<u>ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ. 351 ರಡಿ ಆರೋಪಿಯ ಹೇಳಿಕೆ</u>**

ಪ್ರಶ್ನೆ 1 : ಪ್ರಾ.ಸಾ:1 ಮಹಮ್ಮದ್ ಮುದಾಸಿರ್ ರವರು ತಮ್ಮ ಸಾಕ್ಷದಲ್ಲಿ ಆರೋಪಿಯಾದ ನೀವು ತನಗೆ ಸುಮಾರು ವರ್ಷಗಳಿಂದ ಪರಿಚಯಸ್ಥರಾಗಿದ್ದು, ನಿಮ್ಮ ಗೃಹಕೃತ್ಯ ಮತ್ತು ವ್ಯವಹಾರದ ಅಭಿವೃದ್ಧಿ ಅವಶ್ಯಕತೆಗಾಗಿ ತನ್ನ ಬಳಿ ಸಾಲ ಕೇಳಿದ್ದು ತಾನು ಅದಕ್ಕೆ ಒಪ್ಪಿ ಅದರಂತೆ ನೀವು ನನ್ನಿಂದ ದಿನಾಂಕ 01.08.2024 ರಂದು ರೂ.10,00,000/- ಸಾಲವನ್ನು ಪಡೆದಿದ್ದು ಸದರಿ ಸಾಲವನ್ನು 10 ದಿನದ ಒಳಗಾಗಿ ಮರುಪಾವತಿ ಮಾಡುವುದಾಗಿ ಹೇಳಿದ್ದು ಆದರೆ 10 ದಿನ ಮುಗಿದರೂ ಸಹ ನೀವು ಹಣವನ್ನು ಹಿಂದಿರುಗಿಸದೇ ಇದ್ದಾಗ ತಾನು ನಿಮ್ಮಲ್ಲಿ ದಿನಾಂಕ 12.08.2024 ರಂದು ಬಂದು ಸಾಲದ ಹಣವನ್ನು ಹಿಂದಿರುಗಿಸುವಂತೆ ಕೇಳಿದಾಗ ನೀವು ನಿಮ್ಮ ಖಾತೆಯಿರುವ ಆಕ್ಸಿಸ್ ಬ್ಯಾಂಕ್ ಲಿ. ಶಿವಮೊಗ್ಗ ಶಾಖೆಯ ಚೆಕ್ ನಂ.135491 ಮತ್ತು 135492 ರಲ್ಲಿ ತಲಾ ರೂ.5,00,000/- ದಂತೆ ಹಣ ನಮೂದಿಸಿ ಸಹಿಯನ್ನು ಮಾಡಿ ದಿನಾಂಕವನ್ನು ನಮೂದಿಸಿ ನೀಡಿರುತ್ತೀರಿ. ಅದೇ ರೀತಿ ನೀವು ಸದರಿ ಚೆಕ್ಕುಗಳಲ್ಲಿ ಈಗ ಒಂದು ಚೆಕ್ ಗೆ ಮಾತ್ರ ನಗದೀಕರಣವಾಗುವಷ್ಟು ಹಣವಿದ್ದು ಹಾಗಾಗಿ ಒಂದು ಚೆಕ್ಕನ್ನು ಮಾತ್ರ ನಗದೀಕರಣಕ್ಕೆ ಹಾಜರಿಸುವಂತೆ ಮೌಖಿಕವಾಗಿ ತನಗೆ ತಿಳಿಸಿದ್ದು ಎರಡು ಚೆಕ್ಕಗಳಲ್ಲಿ ಒಂದು ಚೆಕ್ಕನ್ನು 2 ತಿಂಗಳ ನಂತರ ನಗದೀಕರಣಕ್ಕೆ ಸಲ್ಲಿಸಲು ಮೌಖಿಕವಾಗಿ ತಿಳಿಸಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ :

ಪ್ರಶ್ನೆ 2 : ಪ್ರಾ.ಸಾ:1 ರವರು ಮುಂದುವರಿದು, ನಿಮ್ಮ ಕೋರಿಕೆಯಂತೆ 2 ಚೆಕ್ಕುಗಳಲ್ಲಿ 1 ಚೆಕ್ ನಂ.135492 ನ್ನು ನೀವು ನೀಡಿದ ದಿನಾಂಕದಂದೇ ಅಂದರೆ ದಿನಾಂಕ 12.08.2024 ರಂದು ನಗದೀಕರಣಕ್ಕೆ ತಾನು ತನ್ನ ಖಾತೆ ಇರುವ ಹೆಚ್ ಡಿ ಎಫ್ ಸಿ ಬ್ಯಾಂಕ್.,ಲಿ ಚನ್ನಗಿರಿ ಶಾಖೆಯ ಮುಖಾಂತರ ನಗದೀಕರಣಕ್ಕಾಗಿ ಹಾಜರುಪಡಿಸಿದ್ದು, ಸದರಿ ಚೆಕ್ಕು ದಿಃ 19.08.2024 ರಂದು "ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ" ಎಂಬ ಹಿಂಬರಹದೊಂದಿಗೆ ಅಮಾನ್ಯಗೊಂಡಿರುತ್ತದೆ" ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ :

ಪ್ರಶ್ನೆ 3 ಪ್ರಾ.ಸಾ:1 ರವರು ಮುಂದುವರಿದು, ತಕ್ಷಣ ಚೆಕ್ ನಗದೀಕರಣ ಆಗದೇ ಇರುವ ವಿಷಯವನ್ನು ನಿಮಗೆ ತಿಳಿಸಿದಾಗ ನೀವು ಮೌಖಿಕವಾಗಿ ಮನವಿಯನ್ನು ಮಾಡುತ್ತಾ ನೀವು ಕೊಟ್ಟ ಎರಡು ಚೆಕ್ಕುಗಳನ್ನು ಎರಡು ತಿಂಗಳು ಬಿಟ್ಟು ಎರಡನ್ನು ಒಂದೇ ಬಾರಿಗೆ ನಗದೀಕರಣಕ್ಕೆ ಸಲ್ಲಿಸುವಂತೆ ಹೇಳಿದ್ದರಿಂದ ನಿಮ್ಮ ಕೋರಿಕೆಯಂತೆ 2 ತಿಂಗಳ ಕಾಲಾವಕಾಶ ಮುಗಿದ ಮೇಲೆ ದಿಃ16.10.2024 ರಂದು ಚೆಕ್ ನಂ.135491 ಮತ್ತು 135492 ನಗದೀಕರಣಕ್ಕೆ ತಾನು ತನ್ನ ಖಾತೆ ಇರುವ ಹೆಚ್ ಡಿ ಎಫ್ ಸಿ ಬ್ಯಾಂಕ್.,ಲಿ ಚನ್ನಗಿರಿ ಶಾಖೆಯ ಮುಖಾಂತರ ನಗದೀಕರಣಕ್ಕಾಗಿ ಹಾಜರುಪಡಿಸಿದ್ದು, ಸದರಿ ಚೆಕ್ಕುಗಳು ದಿಃ 19.10.2024 ರಂದು "ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ" ಎಂಬ ಹಿಂಬರಹಗಳೊಂದಿಗೆ ಅಮಾನ್ಯಗೊಂಡಿರುತ್ತದೆ" ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ

ಪ್ರಶ್ನೆ 4 : ಪ್ರಾ.ಸಾ:1 ರವರು ಮುಂದುವರಿದು, ಮೇಲ್ಕಂಡ ವಿಚಾರವಾಗಿ ನಿಮಗೆ ಹಲವಾರು ಬಾರಿ ತಿಳಿಸಿದರು ಸಹ ನೀವು ಸಾಲದ ಹಣವನ್ನು ವಾಪಸ್ಸು ನೀಡದೇ ನಿರ್ಲಕ್ಷ್ಯ ವಹಿಸಿರುತ್ತೀರಿ ಮತ್ತು ತನಗೆ ಮೋಸ ಮಾಡಿ ಸಾಲದ ಹಣವನ್ನು ಲಪಟಾಯಿಸಬೇಕೆಂಬ ಉದ್ದೇಶ ಹೊಂದಿರುತ್ತೀರಿ ಆದ್ದರಿಂದ ತಾನು ನಿಮಗೆ ದಿಃ12.11.2024 ರಂದು ತಮ್ಮ ವಕೀಲರ ಮುಖಾಂತರ ನಿಮ್ಮ ಎರಡು ವಿಳಾಸಕ್ಕೆ ಲೀಗಲ್ ನೋಟಿಸ್ ಕಳುಹಿಸಿದ್ದು, ನೀವು ದಿಃ 21.11.2024 ಮತ್ತು

19.11.2024 ರಂದು ನೋಟೀಸ್‌ಗಳನ್ನು ಸ್ವೀಕರಿಸಿದ್ದು, ನಂತರ ನೀವು ಸದರಿ ನೋಟಿಸ್ ಗೆ ಸುಳ್ಳು ಕಾರಣ ಹೇಳಿ ದಿನಾಂಕ 04.12.2024 ರಂದು ಮರುಉತ್ತರವನ್ನು ನೀಡಿರುತ್ತೀರಿ ಆದರೆ ಸದರಿ ಚೆಕ್ಕುಗಳ ಹಣವನ್ನು ಮರುಪಾವತಿಸಿಲ್ಲ ಎಂದು ನಿಪಿ.1 ರಿಂದ 13 ರಂತೆ ದಾಖಲೆಗಳನ್ನು ನಿಶಾನೆಕರಿಸಿಕೊಂಡು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ :

ಪ್ರಶ್ನೆ 5 : ನಿಮ್ಮ ಪರವಾಗಿ ಸಾಕ್ಷಿಗಳು ಇವೆಯೆ?

ಉತ್ತರ :

ಪ್ರಶ್ನೆ 6 : ನೀವು ಹೆಚ್ಚಿಗೇನಾದರೂ ಹೇಳಲು ಇಚ್ಛಿಸುವಿರಾ?

ಉತ್ತರ :

(ಆರೋಪಿಯ ಹೇಳಿಕೆಯನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಕೇಳಿ ಅವರು ಕೊಟ್ಟ ಉತ್ತರವನ್ನು ಅವರು ಕೊಟ್ಟಂತೆ ಬರೆದುಕೊಳ್ಳಲಾಗಿರುತ್ತದೆ ಅಂತಾ ಈ ಮೂಲಕ ದೃಡೀಕರಿಸುತ್ತೇನೆ.)

ಸ್ಥಳಃ ಚನ್ನಗಿರಿ

ದಿನಾಂಕಃ 30.06.2026

**ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಚನ್ನಗಿರಿ.**

**ಆರೋಪಿಯ ಸಹಿ:-**